## **ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಮೂಡಿಗೆರೆ**

### **ಸಿ.ಸಿ. ಸಂಖ್ಯೆಃ 779/2022**

**ಪಿರ್ಯಾದಿ** ಃ ರಾಜ್ಯ, ಪರವಾಗಿ ಬಾಳೂರು ಪೊಲೀಸ್ ಠಾಣೆ,
ಬಾಳೂರು.

**ವಿರುದ್ಧ**

**ಆರೋಪಿತರು** ಃ

1. ಶ್ರೀನಿವಾಸ ಗೌಡ ಬಿನ್ ದಿಃ ಸಿದ್ದೇಗೌಡ,
ವಯಸ್ಸು ಸುಮಾರು 59 ವರ್ಷಕು.

2. ಶೈಲೇಂದ್ರ ಬಿನ್ ಶ್ರೀನಿವಾಸ ಗೌಡ,
ವಯಸ್ಸು ಸುಮಾರು 32 ವರ್ಷ.

3. ಚಂದ್ರಾವತಿ ಕೋಂ ಶ್ರೀನಿವಾಸ ಗೌಡ,
ವಯಸ್ಸು ಸುಮಾರು 56 ವರ್ಷ.

ಆರೋಪಿ ಸಂಖ್ಯೆಃ1 ರಿಂದ 3 ರವರ
ವಾಸಃ ಕೆ.ತಲಗೂರು ಗ್ರಾಮ, ಗಬ್ಗಲ್ ಅಂಚೆ,
ಬಾಳೂರು ಹೋಬಳಿ, ಮೂಡಿಗೆರೆ ತಾಲ್ಲೂಕು.

4. ರಾಘವೇಂದ್ರ ಬಿನ್ ಚಂದು,
ವಯಸ್ಸು ಸುಮಾರು 37 ವರ್ಷ,
ವಾಸಃ ಬಂಡಿಹೊಳೆ, ಕೊಳಲೆ ಗ್ರಾಮ,
ಮೇಗರಮಕ್ಕಿ ಅಂಚೆ, ಎನ್.ಆರ್.ಪುರ ತಾಲ್ಲೂಕು.

5. ಕಾರ್ತಿಕ್.ಹೆಚ್.ಕೆ ಬಿನ್ ಕೃಷ್ಣಮೂರ್ತಿ,
ವಯಸ್ಸು ಸುಮಾರು 28 ವರ್ಷ,
ವಾಸಃ ಹೆಗ್ಗಳವಾನಿ ಅಲೆಹಳ್ಳಿ,
ಮೇಗರಮಕ್ಕಿ ಅಂಚೆ, ಎನ್.ಆರ್.ಪುರ ತಾಲ್ಲೂಕು.

6. ದೀಪಕ್ ಕುಮಾರ್ ಬಿನ್ ಮಂಜುನಾಥ.ವಿ.ಆರ್,
ವಯಸ್ಸು ಸುಮಾರು 31 ವರ್ಷ,
ವಾಸಃ ವಾಟೆಹಂಕಲ್ ಸಗುವಾನಿ ಗ್ರಾಮ,
ಶಿರವಾಸೆ ಅಂಚೆ, ಚಿಕ್ಕಮಗಳೂರು ತಾಲ್ಲೂಕು.

**ದೋಷಾರೋಪಣೆ**

ನಾನು ಶ್ರೀ ಸಚಿನ್.ಡಿ, ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ಮೂಡಿಗೆರೆ, ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ-

**1**. ದಿನಾಂಕ 16.11.2021 ರಂದು ರಾತ್ರಿ 10.30 ರಿಂದ 11.00 ರ ಅವಧಿಯಲ್ಲಿ ಬಾಳೂರು ಪೊಲೀಸ್ ಠಾಣಾ ವ್ಯಾಪ್ತಿಯ ಕೆ.ತಲಗೂರು ಗ್ರಾಮದ ವಾಸಿ ಚಾಸಾ1 ರವರ ಹೆಸರಿನಲ್ಲಿರುವ ಕೆ.ತಲಗೂರು ಗ್ರಾಮದ ಸರ್ವೆ ನಂ.51 ರಲ್ಲಿ ಸುಮಾರು 1 ಎಕರೆ ಕಾಫೀ ತೋಟದ ಬೇಲಿಯ ಹತ್ತಿರ ಆರೋಪಿತರಾದ ನೀವುಗಳು ಅಪರಾಧ ಮಾಡುವ ಏಕೋದ್ದೇಶದಿಂದ ಅಕ್ರಮ ಕೂಟ ರಚಿಸಿರುತ್ತೀರಿ. ಈ ರೀತ್ಯಾ ಆರೋಪಿತರಾದ ನೀವು ಭಾರತ ದಂಡ ಸಂಹಿತೆ ಕಲಂ 147 ಸಹವಾಚಕ ಕಲಂ 149 ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ.

**2.** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರಾದ ನೀವುಗಳು ಅಕ್ರಮ ಕೂಟದ ಸದಸ್ಯರಾಗಿ ಅಪರಾಧ ಮಾಡುವ ಏಕೋದ್ದೇಶದಿಂದ ಕೈಯಲ್ಲಿ ದೊಣ್ಣೆ ಮತ್ತು ರಾಡನ್ನು ಹಿಡಿದುಕೊಂಡು ಜಮೀನಿನ ತಂತಿ-ಬೇಲಿಯನ್ನು ಕಿತ್ತು ತುಂಡು ತುಂಡು ಮಾಡಿ ದೊಂಬಿ ಮಾಡಿರುತ್ತೀರಿ. ಈ ರೀತ್ಯಾ ಆರೋಪಿತರಾದ ನೀವು ಭಾರತ ದಂಡ ಸಂಹಿತೆ ಕಲಂ 148 ಸಹವಾಚಕ ಕಲಂ 149 ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ?

**3.** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರಾದ ನೀವುಗಳು ಅಕ್ರಮ ಕೂಟದ ಸದಸ್ಯರಾಗಿ ಏಕೋದ್ದೇಶದಿಂದ ಮುಂದುವರೆದು, ಚಾಸಾ1 ರಿಂದ 3 ರವರು ಆರೋಪಿತರಾದ ನಿಮಗೆ ಏಕೆ ನಮ್ಮ ತೋಟದ ಬೇಲಿ ಕಿತ್ತು ಹಾಕುತ್ತಿದ್ದೀರಾ? ಎಂದು ಕೇಳಿದ್ದಕ್ಕೆ, ಆರೋಪಿತರಾದ ನೀವುಗಳೆಲ್ಲರೂ ಚಾಸಾ1 ರಿಂದ 3 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು, ಉದ್ದೇಶಪೂರ್ವಕವಾಗಿ ಅವಮಾನಪಡಿಸಿರುತ್ತೀರಿ. ಈ ರೀತ್ಯಾ ಆರೋಪಿತರಾದ ನೀವು ಭಾರತ ದಂಡ ಸಂಹಿತೆ ಕಲಂ 504 ಸಹವಾಚಕ ಕಲಂ 149 ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ?

**4.** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರಾದ ನೀವುಗಳು ಅಕ್ರಮ ಕೂಟದ ಸದಸ್ಯರಾಗಿ ಏಕೋದ್ದೇಶದಿಂದ ಮುಂದುವರೆದು, ನಿಮ್ಮ ಪೈಕಿ 1 ಮತ್ತು 2 ನೇ ಆರೋಪಿತರು ಚಾಸಾ1 ಮತ್ತು 2 ರವರನ್ನು ಕೈಯಲ್ಲಿ ಹಿಡಿದು ಎಳೆದಾಡಿ, ತಳ್ಳಿ ನೆಲಕ್ಕೆ ಬೀಳಿಸಿ, ಅವರ

ಮಾನಕ್ಕೆ ಕುಂದುಂಟಾಗುವಂತೆ ಮಾಡಿರುತ್ತೀರಿ. ಈ ರೀತ್ಯಾ ಆರೋಪಿತರಾದ ನೀವು ಭಾರತ ದಂಡ ಸಂಹಿತೆ ಕಲಂ 354 ಸಹವಾಚಕ ಕಲಂ 149 ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ?

**5.** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರಾದ ನೀವು ಅಕ್ರಮ ಕೂಟದ ಸದಸ್ಯರಾಗಿ ಏಕೋದ್ದೇಶದಿಂದ ಮುಂದುವರೆದು, 2ನೇ ಆರೋಪಿಯಾದ ನೀವು ಚಾಸಾ1 ರವರಿಗೆ ಕೈಯಿಂದ ಮೈ-ಕೈಗೆ ಹೊಡೆದಿರುತ್ತೀರಿ ಮತ್ತು ಚಾಸಾ3 ರವರನ್ನು ತಳ್ಳಿ ನೆಲಕ್ಕೆ ಬೀಳಿಸಿ ಸಾಧಾ ಸ್ವರೂಪದ ಗಾಯವನ್ನುಂಟು ಮಾಡಿರುತ್ತೀರಿ. ಈ ರೀತ್ಯಾ ಆರೋಪಿತರಾದ ನೀವು ಭಾರತ ದಂಡ ಸಂಹಿತೆ ಕಲಂ 323 ಸಹವಾಚಕ ಕಲಂ 149 ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ?

**6.** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರಾದ ನೀವು ಅಕ್ರಮ ಕೂಟದ ಸದಸ್ಯರಾಗಿ ಏಕೋದ್ದೇಶದಿಂದ ಮುಂದುವರೆದು, ಕೈಯಲ್ಲಿ ದೊಣ್ಣೆಗಳನ್ನು ಹಿಡಿದುಕೊಂಡು ಬಂದು ಈ ಸ್ಥಳದಿಂದ ಹೋಗದಿದ್ದರೆ ನಿಮ್ಮನ್ನು ಇಲ್ಲಿಯೇ ಕೊಲೆ ಮಾಡುತ್ತೇವೆಂದು ಪ್ರಾಣ ಬೆದರಿಕೆ ಹಾಕಿರುತ್ತೀರಿ. ಈ ರೀತ್ಯಾ ಆರೋಪಿತರಾದ ನೀವು ಭಾರತ ದಂಡ ಸಂಹಿತೆ ಕಲಂ 506 ಸಹವಾಚಕ ಕಲಂ 149 ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ?

ಸದರಿ ಮೇಲ್ಕಂಡ ಆರೋಪಗಳನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಮಾಡಿದ್ದರಿಂದ**,** ಅವುಗಳು ಈ ನ್ಯಾಯಾಲಯದಿಂದ ವಿಚಾರಣೆಯಾಗತಕ್ಕದೆಂದು ಆದೇಶಿಸಲಾಗಿದೆ**.**

ಪ್ರಃ 1. ಈಗ ಮೇಲೆ ಓದಿ ಹೇಳಿದ ದೋಷಾರೋಪಣೆಯನ್ನು ಕೇಳಿದ್ದೀರಾ***?*** ಅವುಗಳು ನಿಮಗೆ ಅರ್ಥವಾಯಿತೇ***?***

1ನೇ ಆರೋಪಿಯ ಉತ್ತರಃ

2ನೇ ಆರೋಪಿಯ ಉತ್ತರಃ

3ನೇ ಆರೋಪಿಯ ಉತ್ತರಃ

4ನೇ ಆರೋಪಿಯ ಉತ್ತರಃ

5 ನೇ ಆರೋಪಿಯ ಉತ್ತರಃ

6 ನೇ ಆರೋಪಿಯ ಉತ್ತರಃ

ಪ್ರಃ 2. ನೀವು ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ***?***

1 ನೇ ಆರೋಪಿಯ ಉತ್ತರಃ

2 ನೇ ಆರೋಪಿಯ ಉತ್ತರಃ

3 ನೇ ಆರೋಪಿಯ ಉತ್ತರಃ

4 ನೇ ಆರೋಪಿಯ ಉತ್ತರಃ

5 ನೇ ಆರೋಪಿಯ ಉತ್ತರಃ

6 ನೇ ಆರೋಪಿಯ ಉತ್ತರಃ

***(***ಆರೋಪಿತರಿಗೆ ದಿನಾಂಕ 19.06.2023 ರಂದು ದೋಷಾರೋಪಣೆಯನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ***,*** ಅವರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಬರೆದುಕೊಳ್ಳಲಾಯಿತು***.*** ಅದು ಸತ್ಯವಾಗಿಯೂ ಮತ್ತು ಸರಿಯಾಗಿಯೂ ಇರುತ್ತದೆ ಅಂತಾ ಪ್ರಮಾಣೀಕರಿಸುತ್ತೇನೆ***).***

**Sd/-**

ಮೂಡಿಗೆರೆ
ದಿನಾಂಕಃ 19.06.2023

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ**.**ಎಂ**.**ಎಫ್**.**ಸಿ**,** ಮೂಡಿಗೆರೆ**.**